ಆ) ನಿಗದಿತ ಅವಧಿಯಲ್ಲಿ ಬ್ಯಾಂಕ್ ಭದ್ರತೆಗಳನ್ನು ಕೆಳಕಂಡ ಕಾರಣಗಳಿಗಾಗಿ ನೀಡಿರುವುದಿಲ್ಲ

ಅ) ಕೆಲವು ಪ್ರದೇಶಗಳಲ್ಲಿ ಸಂಭವಿಸಿದ ನೀರಾ ಚಳುವಳಿ ಹಾಗೂ ಅಬಕಾರಿ ವರ್ಷದ ಮೊದಲ ಭಾಗದಲ್ಲಿ ಇದ್ದ ಬರ ಪರಿಸ್ಥಿತಿಯ ಕಾರಣ ಸಾರಾಯಿ ಮಾರಾಟದಲ್ಲಿ ಆಗಿರುವ ಇಳಿಕೆ

ಆ) ಅಕ್ಟೋಬರ್‌ನಿಂದ ಡಿಸೆಂಬರ್ 2001ರವರೆಗೆ ರಾಜ್ಯದ 29 ತಾಲ್ಲೂಕುಗಳಲ್ಲಿ ಸಾರಾಯಿ ತಂಗಡಿಗಳ ಮರು ಹರಾಜು ನಡೆದಿದೆ ಸುಸ್ತಿದಾರರಾದ ಗುತ್ತಿಗೆದಾರರು ಸರ್ಕಾರದಲ್ಲಿ ರೇವಣಿ ಇಟ್ಟಿದ್ದ ಒಂದು ತಿಂಗಳಿಗೆ ಸಮನಾದ ಬಾಡಿಗೆ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಇಂತಹ ಗುತ್ತಿಗೆದಾರರು ಗುತ್ತಿಗೆ ನೋಂದಣಿ ಮಾಡಿಕೊಂಡ ಸಂದರ್ಭದಲ್ಲಿ ನೀಡಿದ ಬ್ಯಾಂಕ್ ಭದ್ರತೆ ಹಾಗೂ ಹರಾಜಿನ ನಂತರ ನೀಡಿದ ಭಾಗಶಃ ಬ್ಯಾಂಕ್ ಭದ್ರತೆಗಳನ್ನು ಗುತ್ತಿಗದಾರರಿಂದ ಸರ್ಕಾರಕ್ಕೆ ಬರಬೇಕಾದ ಬಾಕಿಗೆ ಹೊಂದಾಣಿಕೆ ಮಾಡಿಕೊಳ್ಳಲಾಗುತ್ತಿದೆ

ಔರಾದ್ ತಾಲ್ಲೂಕಿನಲ್ಲಿ ಅಕ್ರಮ ಸಾರಾಯಿ ದಂಧೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 138(466)

ಸದಸ್ಯರ ಹೆಸರು ಶ್ರೀ ಗುಂಡಪ್ಪ ವಕೀಲ್ (ಔರಾದ್)

ಉತ್ತರಿಸುವ ಸಚಿವರು ಮಾನ್ಯ ಶ್ರೀ ಎಂ ಎಂ ನಾಣಯ್ಯ(ಅಬಕಾರಿ ರಾಜ್ಯ ಸಚಿವರು)

ಪ್ರಶ್ನೆ

ಅ) ಬೀದರ್ ಜಿಲ್ಲೆ ಔರಾದ್ ತಾಲ್ಲೂಕನಲ್ಲಿ ಅಕ್ರಮವಾಗಿ ಸಾರಾಯಿ ಮಾರಾಟವಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಅಕ್ರಮ ವ್ಯವಹಾರಕ್ಕೆ ಕಾರಣವೇನು ಗುತ್ತಿಗೆದಾರರುಗಳು ವರವಾನಗಿ ಇಲ್ಲದೆ ಇಂತಹ ಅಕ್ರಮ ಸಾರಾಯಿ ಅಂಗಡಿ ನಡೆಸುತ್ತಿರಲು ಕಾರಣಗಳೇನು?

ಇ) ಅಧಿಕೃತವಾಗಿ ಇಲಾಖೆಯಿಂದ ವರವಾನಗಿ ಪಡದಂತಹ ಅಬಕಾರಿ ಗುತ್ತಿಗೆದಾರರ ಹೆಸರು, ವಿವರ ಪಟ್ಟಿ ಒದಗಿಸುವುದು?

ಈ) ಸರ್ಕಾರದ ಗಮನಕ್ಕೆ ಬಂದಂತೆ ಅಕ್ರಮವಾಗಿ ವರವಾನಗಿ ಇಲ್ಲದೆ

ನಡೆಯುತ್ತಿರುವ ಅಂಗಡಿಗಳ ಸಂಖ್ಯೆ ಎಷ್ಟು? ಸರ್ಕಾರವು ಇವುಗಳ ವಿರುದ್ಧ ಕೈಗೊಂಡ ಕ್ರಮಗಳಾವುವು?

ಉತ್ತರ

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಶ್ರೀ ವಿದ್ಯಾನಾಗರ ರೆಡ್ಡಿ ವಿನ್ ವಿ ರಾಜರೆಡ್ಡಿ
ನಂ 268 2, ರನ್ನೆ ಸಂ 12,
ಎಂ ಎಲ್ ಎ ಕಾಲೋನಿ ಬಂಜಾರ್ ಹಿಲ್ಸ್
ಹೈದರಾಬಾದ್-34
ಆಂಧ್ರಪ್ರದೇಶ ರಾಜ್ಯ

ಈ) ಉದ್ಭವಿಸುವುದಿಲ್ಲ

ನೀರಾ ಇಳಿಸುತ್ತಿರುವ ವಿವರ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 139(468)

ಸದಸ್ಯರ ಹೆಸರು ಶ್ರೀ ಗುರುಸ್ವಾಮಿ ಸಿ (ಚಾಮರಾಜನಗರ)

ಉತ್ತರಿಸುವ ಸಚಿವರು ಶ್ರೀ ಎಂ ಎಂ ನಾಣಯ್ಯ(ಅಬಕಾರಿ ರಾಜ್ಯ ಸಚಿವರು)

ಪ್ರಶ್ನೆ

ಅ) ನೀರಾ ಇಳಿಸುವುದು ಯಾವ ಅಬಕಾರಿ ನಿಯಮದಡಿಯಲ್ಲಿ ಅಪಾರಧವಾಗಿದೆ, ತಿಳಿಸುವುದು?

ಆ) ಈವರೆಗೆ ರಾಜ್ಯದಲ್ಲಿ ನೀರಾ ಬಗ್ಗೆ ಎಷ್ಟು ಕೇಸುಗಳು ದಾಖಲಾಗಿವೆ, ಜಿಲ್ಲಾವಾರು ಮಾಹಿತಿ ನೀಡುವುದು?

ಇ) ನೀರಾ ಇಳಿಸುತ್ತಿದ್ದವರಿಂದ ಜಪ್ತಿ ಮಾಡಿರುವ ವಾಹನಗಳ ವಿವರಗಳನ್ನು ನೀಡುವುದು?